ಬಜ್ಜಿ, ಕುರುಕಲು ತಿಂಡಿ ಎಲ್ಲದರ ಬೆಲೆ ಜಾಸ್ತಿ ಆಗುತ್ತೆ' ಎಂದು ವಿಶ್ವ ತಿಂಡಿಗಳ ಪಟ್ಟಿಯನ್ನು ಕೊಟ್ಟ.

ಅಂಗಡಿಯವನಿಗೆ ವಿಶ್ವನ ಮಾತು ಹಿಡಿಸಿತು. ಯಾಕೆಂದರೆ ಅವನು ಸಹ ಬೋಂಡ ಪ್ರಿಯ.

'ಬೋಂಡ, ಬಜ್ಜಿಗೆ ತೊಂದರೆ ಆಗುತ್ತೆ ನಿಜ, ಹಾಗಂತ ನೀವು ಪುಟಿನ್‌ಗೆ ಒಂದು ಮಾತು ಹೇಳಿ' ಎಂದ ಅಂಗಡಿಯವ. ಪುಟಿನ್‌ಗೆ ಬೋಂಡ, ಬಜ್ಜಿ ತಿಂದು ಅಭ್ಯಾಸ ಇದೆಯೋ ಇಲ್ಲವೋ ಗೊತ್ತಿಲ್ಲವಲ್ಲ ಎಂಬ ಅನುಮಾನ ಕಾಡಿತು.

'ಸ್ವಾಮೀ, ಉಕ್ರೇನ್‌ನಿಂದ ನಮಗೆ ಅಡುಗೆ ಎಣ್ಣೆ ಬರ್ತಾ ಇತ್ತು. ಉಕ್ರೇನ್‌ನಲ್ಲಿ ಯುದ್ಧ ಶುರು



ಆದ್ಮೇಲೆ ಎಣ್ಣೆ ಬೆಣ್ಣೆಗಿಂತ ದುಬಾರಿ ಆಗ್ತಿದೆ. ಏರೋಡ್ರೋಮ್‌ಗಳ ಮೇಲೆ ಬಾಂಬ್ ಬಿದ್ದಿರುವಾಗ ಎಣ್ಣೇನ ಹೇಗೆ ಲಿಫ್ಟ್ ಮಾಡ್ತಾರೆ? ಎಣ್ಣೆ ತಯಾರಿಕಾ ಘಟಕಗಳೇ ನೆಲ ಕಚ್ಚಿವೆ. ಅವರಿಗೆ ಅಲ್ಲಿ ನೀರು ಸಿಕ್ತಾ ಇಲ್ಲ, ನಮಗೆ ಇಲ್ಲಿ ಎಣ್ಣೆ ಸಿಕ್ತಾ ಇಲ್ಲ' ಎಂದ.

ಮಡದಿ ವಿಶಾಲೂಗೆ ಫೋನ್ ಮಾಡಿ ಯುದ್ಧದ ವಿಷಯ ತಿಳಿಸಿದರೂ ಅವಳು ಒಪ್ಪಲಿಲ್ಲ. ಎಣ್ಣೆ ಮತ್ತು ಹಸಿಮೆಣಸಿನಕಾಯಿ ತರಬೇಕೆಂದು ಪಟ್ಟು ಹಿಡಿದು ಫೋನಲ್ಲೇ ರೇಗಿದಳು.

'ಯುದ್ಧ ಮುಗಿದ ಮೇಲೆ ಬೆಲೆ ಜಾಸ್ತಿ ಮಾಡಬೇಕು ಕಣ್ರೀ. ಟೀವಿಯಲ್ಲಿ ಯುದ್ಧದ ಸೀನ್ ನೋಡಿ ಸ್ಟಾಕಲ್ಲಿ ಇರೋ ಎಣ್ಣೆ ಬೆಲೆ ಜಾಸ್ತಿ ಮಾಡೋ ಹಾಗಿಲ್ಲ. ಗುಲ್ಡು ಥರ ಕೇಳಿದಷ್ಟು ಹಣ ಕೊಟ್ಟು ಬರಬೇಡಿ. ಇವತ್ತು ಮಿರ್ಚಿ ಬಜ್ಜಿ ಮಾಡಲೇಬೇಕು' ಎಂದು ಖಾರವಾಗಿ ಹೇಳಿದಳು.

ಮಡದಿಯ ಮಾತನ್ನು ಗಂಡ ಕೇಳಬಹುದು. ಆದರೆ ಅಂಗಡಿಯವ ಕೇಳೊಲ್ಲ. ಹೆಚ್ಚಿನ ಬೆಲೆ ತೆತ್ತು ವಿಶ್ವ ಎಣ್ಣೆಯನ್ನು ಖರೀದಿಸಿ ಮುನ್ನಡೆದ. ಅಲ್ಲಿಂದ ಮೆಣಸಿನಕಾಯಿ ಕೊಳ್ಳಲು ಮಾರ್ಕೆಟ್‌ಗೆ ಬಂದ. ಅಲ್ಲಿ ತರಕಾರಿ ಮಾರುವ ಮಹಿಳೆಯರು ಚರ್ಚೆ ಮಾಡುತ್ತಿದ್ದರು.

'ಹಿಂಗಾದ್ರೆ ಏನು ಕಥೆ! ಹೆಣಗಳು ರಪರಪ ಉದುರ್ತಾ ಇವೆ. ಈ ಕಡೇನೂ ಹೆಣ, ಆ ಕಡೇನೂ ಹೆಣ! ಹೆಣಗಳೇ ಎದ್ದು ಹೋಗಿ ಬೆಂಕೀಲಿ ಬೀಳ್ತಿವೆ.'

'ಎಲ್ಲಿ? ಯಾರದ್ದು?' ಎಂದು ವಿಶ್ವ ಕುತೂಹಲದಿಂದ ಕೇಳಿದ.

'ಏನ್ ಸ್ವಾಮೀ, ಹಿಂಗಂತೀರಾ? ಟೀವಿ ನೋಡೊಲ್ವೇನು? ಇವರ ಮೇಲೆ ಅವರು ಬಾಂಬ್ ಹಾಕ್ತಾರೆ, ಅವರ ಮೇಲೆ ಇವರು ಶೆಲ್ ಹಾಕ್ತಾರೆ. ಒಟ್ನಲ್ಲಿ ಸಾಯೋದು ನಾವು' ಎಂದಳು.

'ಅಲ್ಲಮ್ಮಾ, ಉಕ್ರೇನ್‌ನಲ್ಲಿ ಬಾಂಬ್ ಬಿದ್ರೆ ಸಿಟಿ ಮಾರ್ಕೆಟ್ಟಲ್ಲಿರೋ ನೀನ್ಯಾಕೆ ಸಾಯ್ಬೇಕು?' ಎಂದ ವಿಶ್ವ.

'ಪದಾರ್ಥಗಳ ಬೆಲೆ ಜಾಸ್ತಿ ಆಗಿದೆ ಸ್ವಾಮಿ. ಲಾರಿ ಬಾಡಿಗೆ ಜಾಸ್ತಿ ಆಗ್ತಿದೆ.'

'ಯುದ್ಧಕ್ಕೂ ಲಾರಿಗೂ ಏನು ಸಂಬಂಧ?' ಎಂದು ವಿಶ್ವ ದಬಾಯಿಸಿದ.

'ಕುರುಡು ಎಣ್ಣೆ ರಷ್ಯಾ ತಾನೇ ಕೊಡ್ಬೇಕು?' ಎಂದು ತರಕಾರಿಯವಳು ಹೇಳಿದಾಗ ವಿಶ್ವನಿಗೆ ನಗು ಬಂತು.

'ಅದು ಕುರುಡು ಎಣ್ಣೆ ಅಲ್ಲ, (ಕ್ರೂಡ್ ಆಯಿಲ್) **Crude Oil** ಅನ್ನು.'

'ಎಂಥದ್ದೋ ಒಂದು. ಕುರುಡು ಎಣ್ಣೆ ಬಂದ್ರೆ ನಾವು ಅದನ್ನು ಸೋಸಿ, ಜರಡಿ ಹಿಡಿದು ಪೆಟ್ರೋಲು, ಡೀಸೆಲು ಮಾಡಿ ಗಾಡಿಗೆ ಹಾಕಬಹುದು. ಎಣ್ಣೆ ಏಟು ಬಾರಿ ಇದೆ ಸ್ವಾಮಿ' ಎಂದಳು.

'ಯುದ್ಧ ಅಂತ ರೇಟುಗಳು ಜಾಸ್ತಿ ಮಾಡ್ತಾರೆ. ಯುದ್ಧ ನಿಂತ ಮೇಲೆ ರೇಟು ಇಳಿಯೊಲ್ಲ. ಯುದ್ಧದ ಎಫೆಕ್ಟು ಉಕ್ರೇನ್‌ನಿಂದ ಬೆಂಗಳೂರಿನ ಸಿಟಿ ಮಾರ್ಕೆಟ್‌ವರೆಗೆ ಬಂದಿದೆ' ಎಂದು ವಿಶ್ವನಿಗೆ ಆಶ್ಚರ್ಯವಾಯಿತು. ಬೋಂಡ ಮಾಡಲು ಬೇಕಾದ ಎಲ್ಲಾ ಐಟಮ್ಮುಗಳನ್ನ ಹೆಚ್ಚು ಬೆಲೆ ತೆತ್ತು ಕೊಂಡ. ಮನೇಲಿ ವಿಶ್ವ ಬರುವವರೆಗೆ ವಿಶಾಲು ತನ್ನ ಗೆಳತಿ ಮೀನಾಕ್ಷಿ ಜೊತೆ ಮಾತಾಡುತ್ತಿದ್ದಳು.

'ನೀವೇನೇ ಹೇಳಿ ವಿಶಾಲೂ, ಎಲ್ಲಿ ಯುದ್ಧ ಆದ್ರೂ ನಮ್ಮ ಅಡುಗೆ ಮನೆಗೇ ತೊಂದ್ರೆ! ನಿಮ್ಮನೇಲಿ ಹೇಗೆ?' ಎಂದು ಗೆಳತಿ ಮೀನಾಕ್ಷಿ ಕೇಳಿದಳು.

'ನಮ್ಮನೇಲಿ ನಾನೇ ಪುಟಿನ್ನು! ನನ್ನ ಗಂಡ ಎದುರು ವಾದಿಸಿದರೆ ಬೆಡ್‌ರೂಮಲ್ಲಿ ಬೀಳಿಸಿ ಟ್ಯಾಂಕರ್ ಓಡಿಸ್ತೀನಿ' ಎಂದಳು ವಿಶಾಲು.

ಇಬ್ಬರಿಗೂ ನಗು ಬಂತು.

'ಉಕ್ರೇನ್ ಕೂಡ ಸ್ಟ್ರಾಂಗಾಗೇ ಇದೆ ಅಲ್ವಾ ವಿಶಾಲೂ?'

'ನೀವು ಮಾಡೋ ಚಕ್ಲಿಗಿಂತ ಉಕ್ರೇನ್ ಗಟ್ಟಿಯಾಗಿದೆ' ಎಂದು ವಿಶಾಲು ಜೋಕ್ ಮಾಡಿದಳು.

'ಅದ್ಸರಿ, ಗಂಡನ್ನ ಎದುರಿಸೋಕೆ ಏನೇನು ಅಸ್ತ್ರಗಳು ಇಟ್ಕೊಂಡಿದ್ದೀರ?' ಎಂದಳು ಮೀನಾಕ್ಷಿ.

'ನಮ್ಮ ಯಜಮಾನರು ಅವರ ಆಫೀಸ್‌ನ ಕಲೀಗ್ ಕಮಲೀ ಜೊತೆ ಹೋಗಿ ಎಂಥದ್ದೋ ಫೈಲ್ಸ್ ಸಿನಿಮಾ ನೋಡ್ಕೊಂಡು ಬಂದಿದ್ದಾರೆ' ಎಂದು ನೊಂದು ನುಡಿದಳು ವಿಶಾಲು.

'ಅದು ಫೈಲ್ಸ್ ಅಲ್ಲ, ಕಾಶ್ಮೀರಿ ಫೈಲ್ಸ್' ಎಂದು ಮೀನಾಕ್ಷಿ ತಿದ್ದಿದಳು.

'ಎರಡೂ ಬೇರೆ ಬೇರೇನಾ?'

'ಹೌದು ವಿಶಾಲೂ, ಮನರಂಜನೆ ಇಲ್ಲದ ಸಿನಿಮಾ ನೋಡೋಕೆ ಯಾರಾದ್ರೂ ಆಫೀಸ್ ಹುಡ್ಗೀರ್‌ನ ಕರ್ಕೊಂಡು ಹೋಗ್ತಾರಾ? ಅದೊಂದು ನೆಪ ಕಣ್ರೀ. ಕಾಶ್ಮೀರಿ ಸಿನಿಮಾ ಅಂತ ಹೇಳ್ಬಿಟ್ಟು ಹಳೇ ಹಿಂದೀ ಸಿನಿಮಾ 'ಕಾಶ್ಮೀರ್ ಕೀ ಕಲಿ ನೋಡ್ಕೊಂಡು ಬಂದಿದ್ದಾರೆ. ಅದೊಂದು ಪ್ರೇಮ್ ಕಹಾನಿ.'

'ಕಾಶ್ಮೀರ್ ಕೀ ಕಲೀನಾ?' ವಿಶಾಲೂಗೆ ಗಾಬರಿ.

'ಅದರಲ್ಲಿ ಕಲಿಯೋದು ತುಂಬಾ ಇದೆ ವಿಶಾಲೂ, ಲವ್ ಹೇಗೆ ಮಾಡಬೇಕು ಅಂತ ಸಿನಿಮಾದಲ್ಲಿ ಇಂಚಿಂಚೂ ಕಲಿಸಿದ್ದಾರೆ.'

ವಿಶಾಲೂ ಫ್ಲ್ಯಾಷ್‌ಬ್ಯಾಕ್‌ಗೆ ಜಾರಿದಳು. ಎಂದೋ ಯೂಟ್ಯೂಬಲ್ಲಿ ನೋಡಿದ ಹಳೆಯ ಸಿನಿಮಾ ನೆನಪಾಯಿತು.

'1964ರ ಸಿನಿಮಾ ತಾನೇ ಮೀನಾಕ್ಷಿ?'

'ಹೌದು, ಶಮ್ಮೀಕಪೂರು ಹೀರೋಯಿನ್‌ನ ಎಳೆದಾಡಿ ಹಿಂಡಿ, ಹಿಪ್ಪೆ ಮಾಡ್ತಾನೆ. ಅವಳನ್ನ ಕಳ್ಳೇಕಾಯಿ ಮಾಡಿ ಗಾಣಕ್ಕೆ ಹಾಕಿ ಎಣ್ಣೆ ತೆಗೀತಾನೆ' ಎಂದು ಮೀನಾಕ್ಷಿ ಹೊಟ್ಟೆ ಉರಿಸಿದಳು.

'ಅದರಲ್ಲಿ ರವೀಂದ್ರನಾಥ ಟ್ಯಾಗೂರ್ ಹೆಸರು ಇದೆ ಅನ್ಸುತ್ತೆ.'

'ಅಲ್ಲ, ಶರ್ಮಿಳಾ ಟ್ಯಾಗೂರ್! ಆ ಸಿನಿಮಾ ಟೀವೀಲಿ ಆಗಾಗ ಬರ್ತಿರುತ್ತೆ. ನೀವೂ ನೋಡಿರ್ತೀರ ವಿಶಾಲೂ, ನಿಮ್ಮ ಗಂಡ ಕಮಲಿ ಜೊತೆ ಆ ಸಿನಿಮಾ ನೋಡಬಾರದಿತ್ತು' ಎಂದು ಫಿಟ್ಟಿಂಗ್ ಇಟ್ಟಳು.

'ನಮ್ಮೆಜಮಾನ್ರು ಕಾಶ್ಮೀರ್ ಕೀ ಕಲೀಗೇ ಹೋಗಿರೋದು ಅಂತ ನಿಮಗೆ ಹೆಂಗೆ ಖಚಿತವಾಯ್ತು?' ಎಂದಾಗ ಮೀನಾಕ್ಷಿಗೆ ಹೇಳಲೋ ಬೇಡವೋ ಎಂದು ಯೋಚಿಸಿ ಸುಮ್ಮನಾದಳು.

ಆಫೀಸ್ ಸಹೋದ್ಯೋಗಿ ಜೊತೆ ಚಾರಿತ್ರಿಕ